ಗೊತ್ತುಪಡಿಸಿ ಸದಸ್ಯರೆಲ್ಲ ಹೊರಗೆ ಬಂದಾಗ ಮೂಸಬ್ಬ ಸಾಕಷ್ಟು ನಿರಾಳನಾಗಿದ್ದ. ಅದಕ್ಕೆ ಪಂಚಾಯತ್‌ನವರ ಅನುಮೋದನೆಯೂ ಸಿಕ್ಕಿತು.

ಅವರು ಹಾಗೆ ಪೂಜೆಯ ದಿನ ನಿಷ್ಕರ್ಶಿಸಿ ಬಂದ ಮೇಲೆ ಪೂಜೆಯ ದಿನದ ನಡುವೆ ಇನ್ನೊಂದು ವಿಚಾರ ಊರಲ್ಲೆಲ್ಲ ಸುದ್ದಿಯಾಯಿತು. ಪಿಯು ಕಾಲೇಜಿನಲ್ಲಿ ಸಯನ್ಸ್ ವಿಭಾಗದ ಪ್ರಾಧ್ಯಾಪಕರೊಬ್ಬರು 'ಅಶ್ವತ್ಥದ ಮರದ ಔಷಧೀಯ ಗುಣ'ಗಳ ಬಗ್ಗೆ ಹೇಳಿದ್ದು ಅವರ ಕಿವಿಗೆ ಬಿತ್ತು. 'ಅಶ್ವತ್ಥದ ಮರಕ್ಕೆ ಔಷಧೀಯ ಗುಣವಿದೆ ಎನ್ನುವುದನ್ನು ವಿಜ್ಞಾನವೂ ಒಪ್ಪಿದೆ. ಅದರ ಮೂಲಕ ಹಾದ ಗಾಳಿ ಸೇವಿಸಿದರೂ ಸಾಕು, ಸುಮಾರು ಐವತ್ತು ಬಗೆಯ ರೋಗಗಳು ಗುಣವಾಗುತ್ತದಂತೆ. ನೀವು ಬೇಕಿದ್ದರೆ ವಿಕ್ಕಿಪೀಡಿಯಾ ನೋಡಿ, ಗೊತ್ತಾಗುತ್ತದೆ' ಎಂದದ್ದವರು. ಯಾರೋ ಅದನ್ನು ಕೇಳಿ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂದು ಅವರನ್ನು ಉಬ್ಬಿಸಿದರು. ಆದುದರಿಂದ ಅವರು ಒಂದು ವಿವರವಾದ ಲೇಖನವನ್ನು ಬರೆದು ಜಿಲ್ಲಾ ಕೇಂದ್ರದಿಂದ ಹೊರಡುವ ಪತ್ರಿಕೆಗೆ ಕಳಿಸಿದರು. ಪತ್ರಿಕೆ ಇಂಟರ್‌ನೆಟ್‌ನಿಂದ ಹುಡುಕಿ ಮರದ ಒಂದು ಚಿತ್ರ ತೆಗೆದು ಅದರೊಂದಿಗೆ ಆ ಲೇಖನವನ್ನು ತನ್ನ ಸಂಚಿಕೆಯ ಐದನೇ ಪುಟದಲ್ಲಿ ಪ್ರಕಟಿಸಿತು. ಅವರೇನೂ ಈ ಮರ ಕಡಿಯುವ ವಿಚಾರವನ್ನು ಆ ಲೇಖನದಲ್ಲಿ ಬರೆದಿರಲಿಲ್ಲ. ಅದು ಅವರ ಉದ್ದೇಶವೂ ಆಗಿರಲಿಲ್ಲ. ಅವರು ಬಾಟನಿಯ ಪ್ರಾಧ್ಯಾಪಕರು. ಅವರ ಅಧ್ಯಯನದ ವ್ಯಾಪ್ತಿಯಲ್ಲಿ ಅದನ್ನು ಬರೆದು ಪ್ರಕಟಿಸಿದ್ದರು. ಆದರೆ ಅದರ ಫಲಪ್ರಾಪ್ತಿ ಮಾತ್ರ ಬೇರೆಯದಾಯಿತು.

ಜಿಲ್ಲಾ ಕೇಂದ್ರದಿಂದ ಹೊರಡುತ್ತಿದ್ದ ಆ ದಿನಪತ್ರಿಕೆಗೆ ಬಹಳ ಪ್ರಸಾರವಿತ್ತು. ಆ ಭಾಗದ ಜನರು ಅದನ್ನು ಓದದೇ ಇಲ್ಲ. ಓದುವುದು ಮಾತ್ರವಲ್ಲ, ಸುದ್ದಿಗಳ ಚರ್ಚೆಯೂ ಮಾತುಕತೆಗಳಲ್ಲಿ ಬಂದೇ ಬರುತ್ತಿತ್ತು. ಆದುದರಿಂದ ಅವರಿಗೆ ಈ ಸುದ್ದಿಯೊಡನೆ ಮೂಸಬ್ಬನ ಅರ್ಜಿಯಿಂದಾಗಿ ಊರಿನಲ್ಲಿ ಒಂದು ಅಶ್ವತ್ಥದ ಮರ ಕಡಿಯಲು ಪಾಪ ಪರಿಹಾರಾರ್ಥ ಪೂಜೆ ನಡೆಯುವ ಸುದ್ದಿಯೂ ಲಭ್ಯವಾಯಿತು. ಜಿಲ್ಲಾ ಕೇಂದ್ರದಲ್ಲಿ ಅದನ್ನು ತಿಳಿದ ಶಾಲು ಹೊದ್ದು ತಿರುಗುವ ಕೆಲವು ಜನರು ಈ ಬಗ್ಗೆ ಮಾತನಾಡುತ್ತಾ, 'ಅದು ಹೇಗಯ್ಯ ಅಶ್ವತ್ಥದ ಮರವನ್ನು ಕಡಿಯುತ್ತಾರಂತೆ? ಇದು ಅವರ ಜಾತಿಯವರ ಹುನ್ನಾರ. ಅವರ ಓಟುಗಳ ಸಲುವಾಗಿ ಪ್ರಸ್ತುತ ಸರಕಾರ ಕೂಡಾ ಅವರ ಪರವಾಗಿ ಇದೆ. ನಾವು ಇದನ್ನು ಪ್ರತಿಭಟಿಸಬೇಕು. ಇಲ್ಲದಿದ್ದರೆ ನಮ್ಮ ಸಂಸ್ಕೃತಿ ಉಳಿಯುವುದಿಲ್ಲ' ಎಂದು ಉದ್ಗಾರ ತೆಗೆದರು. ಉದ್ಗಾರ ಉದ್ಗಾರಕ್ಕಷ್ಟೇ ಸೀಮಿತವಾಗಲಿಲ್ಲ. ಸಮಾಲೋಚನೆಗಳು ನಡೆದು ಒಂದು ತಂಡ ಫಾರೆಸ್ಟ್ ಆಫೀಸಿನ ಎದುರು ಧರಣಿ ಕೂತಿತು. ಇನ್ನೊಂದು ತಂಡ ಕೋರ್ಟಿನಲ್ಲಿ ತಕರಾರು ಅರ್ಜಿ ಹಾಕಲು ವಕೀಲರ ಬಳಿಗೆ ಹೋಯಿತು. ಮತ್ತೊಂದು ತಂಡ ಊರಿಗೆ ಆಗಮಿಸಿ ದೇವಸ್ಥಾನದ ಮೊಕ್ತೇಸರರನ್ನು ಭೇಟಿಯಾಗಿ ಅವರನ್ನೂ ಅರ್ಚಕರನ್ನೂ ಪ್ರಶ್ನಿಸಿತು. ಅಲ್ಲಿಯೇ ಇದ್ದ ಅರ್ಚಕರು, 'ನಮ್ಮದು ಪೂಜೆ ಮಾಡುವುದು ಉದ್ಯೋಗ. ನಾವು ಅಷ್ಟನ್ನು ಮಾತ್ರ ಮಾಡುತ್ತೇವೆ. ಅದಕ್ಯಾಕೆ ಅಡ್ಡ ಬರುತ್ತೀರಿ?' ಎಂದು ಹೇಳಿ ಕೈ ತೊಳೆದುಕೊಂಡರು. ಆ ಮೇಲೆ ಶಾಲಿನ ಮಂದಿಯ ತಂಡ ರಾತ್ರೋರಾತ್ರೆ ಊರಿನ ಎಲ್ಲರ ಮನೆಗಳಿಗೂ ಭೇಟಿ ಕೊಟ್ಟು ಒಂದು ಪ್ರತಿಭಟನಾ ಮೆರವಣಿಗೆ ಮಾಡುವುದಾಗಿ ಹುರಿದುಂಬಿಸಿತು. ಫಾರೆಸ್ಟ್ ಗಾರ್ಡನಿಗೆ ಪೂಜೆಯ ಹಿಂದಿನ ದಿನ ಚೆನ್ನಾಗಿ ಕುಡಿಸಿ ತಮ್ಮ ಕಡೆಗೆ ಮಾಡಿಕೊಂಡಿದ್ದಾರೆ ಎಂಬ ಸುದ್ದಿಯೂ ಇತ್ತು.

ಫಾರೆಸ್ಟ್ ಆಫೀಸಿನ ಮುಂದೆ ಧರಣಿ ಕೂತದ್ದರಿಂದ ಅದು ಜಿಲ್ಲಾಧಿಕಾರಿಗಳ ಗಮನಕ್ಕೂ